ಆ) ಇವರಿಗೆ ಕಲ್ಪಿಸಿರುವ ಸೌಲಭ್ಯಗಳೇನು;

ಇ) ಬೆಳತೋಟ ಹಾಗೂ ನಾಗೂರು ಹಳ್ಳಿಗಳ ಜನರು ತಮ್ಮ ಹೊಲ ಮನೆ ಕಳೆದುಕೊಂಡಿದ್ದು ಇವರಿಗೆ 2ನೇ ಪುನರ್ವಸತಿ ಕೇಂದ್ರದ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇವರಿಗೆ 2ನೇ ಪುನರ್ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಗಂಡೂರಿ ನಾಲಾ ಯೋಜನೆಯಡಿಯಲ್ಲಿ ಈ ಕೆಳಕಂಡ 2 ಗ್ರಾಮಗಳು ಮುಳಗಡೆಯಲ್ಲಿ ಬರುತ್ತವೆ.

(1) ಬೆಳಕೋಟಾ (2) ಧಮ್ಮೂರ

ಬೆಣ್ಣೆ ತೊಠಾ ಯೋಜನೆಯಡಿಯಲ್ಲಿ ಈ ಕೆಳಕಂಡ ಒಟ್ಟು 9 ಗ್ರಾಮಗಳು ಮುಳುಗಡೆಯಲ್ಲಿ ಬರುತ್ತದೆ.

1) ತೊಂಡಕಲ್ 2) ಅಂಕಲಗಾ 3) ಸಿರಗಾಪೂರ 4) ಯಕ್ಕಂಚಿ 5) ನಾಗೂರ

6) ಕಡಬೂರ 7) ಹರಕಂಚಿ 8) ಸಾವತಖೇಡ 9) ಕನ್ನಡಗಿ

ಆ) ಗಂಡೂರಿ ನಾಲಾ ಮುಳುಗಡೆಯಾದ ಪ್ರದೇಶದಲ್ಲಿ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿದ್ದು, ಒಳರಸ್ತೆ ಹಾಗೂ ಬದಿಯ ಚರಂಡಿ ನಿರ್ಮಾಣ, ಮಸೀದಿ, ಐದು ಕೋಣೆ ಶಾಲೆ, ಸಮುದಾಯ ಭವನ, ದೇವಾಲಯ, ಬಸ್ ನಿಲ್ದಾಣ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಸರಬರಾಜು, ಬೀದಿ ದೀಪಗಳು, ತಾತ್ಕಾಲಿಕ ಶೆಡ್‌ಗಳ ನಿರ್ಮಾಣ ಮಾಡಲಾಗಿದೆ. ಇವುಗಳಲ್ಲದೆ ಹನುಮಾನ ಮಂದಿರ, ಬುದ್ಧ ವಿಹಾರ, ಅಂಗನವಾಡಿ ಹಾಗೂ ಶಾಲೆಗೆ ಕಂಪೌಂಡ್ ಗೋಡೆ ನಿರ್ಮಾಣ ಮಾಡಲಾಗುತ್ತಿದೆ.

ಬೆಣ್ಣೆತೋಠಾ ಯೋಜನೆಯಲ್ಲಿ ಮುಳುಗಡೆಯಾಗುವ ಸಂತ್ರಸ್ತರಿಗೆ ಹೇರೂರ ಗ್ರಾಮ ಸೇರಿಕೊಂಡು 9 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ಕೂಡು ರಸ್ತೆ, ನೀರು ಸರಬರಾಜು, ವಿದ್ಯುತ್ ಸರಬರಾಜು, 5 ಕೋಣೆ ಶಾಲೆ, ಸಮುದಾಯ ಭವನ, ದೇವಾಲಯ, ಮಸೀದಿ, ಬಸ್ ನಿಲ್ದಾಣ, ಶೌಚಾಲಯ, ಸ್ಮಶಾನ ಭೂಮಿ ವ್ಯವಸ್ಥೆ ಮಾಡಲಾಗಿದೆ. ನಾಗೂರ ಪುನರ್ವಸತಿ ಕೇಂದ್ರದಲ್ಲಿ ನೀರು ಸರಬರಾಜು ಹಾಗೂ ವಿದ್ಯುತ್ ಸರಬರಾಜು ಇತ್ಯಾದಿ

ಇ) ಮುಖ್ಯ ಇಂಜಿನಿಯರ್ ಜಲಸಂಪನ್ಮೂಲ ಇಲಾಖೆ ನೀರಾವರಿ ಯೋಜನೆ ಗುಲ್ಬರ್ಗಾರವರ ಅಭಿಪ್ರಾಯ ಪಡೆಯಲಾಗಿದ್ದು, ಇದರ ಅವಶ್ಯಕತೆ ಇಲ್ಲವೆಂದು ವರದಿ ಮಾಡಿರುತ್ತಾರೆ.

ಈ) ಉದ್ಭವಿಸುವುದಿಲ್ಲ.

ಮೈಸೂರು ಮಿನರಲ್ಸ್ ಕಂಪನಿ ಅಕ್ರಮವಾಗಿ ಜಮೀನು ಒತ್ತುವರಿ ಮಾಡಿರುವುದು

1992(2416) - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಪೇಪರ್ ಮಿಲ್ಸ್‌ಗೆ ಸರ್ಕಾರ ಎಷ್ಟು ಎಕರೆ ಭೂಮಿಯನ್ನು ಯಾವ ಪ್ರದೇಶದಲ್ಲಿ ಗುತ್ತಿಗೆ ನೀಡಿದೆ;

ಆ) ಸರ್ಕಾರ ನೀಡಿದ್ದ ಭೂಮಿಯ ಜೊತೆಗೆ ಎಂ.ಪಿ.ಎಂ. ನವರು ಅರಣ್ಯ ಭೂಮಿ ಹಾಗೂ ಗೋಮಾಳವನ್ನು ಒತ್ತುವರಿ ಮಾಡಿಕೊಂಡಿರುವುದು ನಿಜವೇ; (ವಿವರ ನೀಡುವುದು);

ಇ) ಒತ್ತುವರಿಗೆ ಸಂಬಂಧಪಟ್ಟಂತೆ ನ್ಯಾಯಾಲಯ ನೀಡಿರುವ ಆದೇಶವೇನು; ಆದೇಶವನ್ನು ಪಾಲಿಸಲಾಗಿದೆಯೇ;

ಈ) ಒತ್ತುವರಿ ಮಾಡಿಕೊಂಡಿರುವ ಪ್ರದೇಶದಲ್ಲಿ ಮರಗಳ ಕಟಾವು ಮಾಡಲು ಅನುಮತಿ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ, ಈ ಕುರಿತು ಸರ್ಕಾರದ ನಿಲುವೇನು;

ಉ) ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಒತ್ತುವರಿ ಪ್ರದೇಶದ ಸುತ್ತಮುತ್ತಲ ನಿವಾಸಿಗಳಿಗೆ ಮೂಲಭೂತ ಅಗತ್ಯತೆಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಊ) ಭೂಮಿ ಒತ್ತುವರಿ ಮಾಡಿಕೊಂಡಿರುವ ಎಂ.ಪಿ.ಎಂ. ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 27 ಎಫ್‌ಡಿಪಿ 79 ದಿ : 11-8-1980ರ ಪ್ರಕಾರ ಮೈಸೂರು ಕಾಗದ ಕಾರ್ಖಾನೆಗೆ ಸರ್ಕಾರ 30,000 ಹೆಕ್ಟೇರ್ (25,000 ಎಕರೆ) ಕ್ಷೀಣಿತ ಅರಣ್ಯ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡಿದೆ. ಇದಲ್ಲದೇ ಸರ್ಕಾರಿ ಪತ್ರದ ಸಂಖ್ಯೆ ಎಫ್‌ಎಫ್‌ಡಿ 180 ಎಫ್‌ಐಸಿ 84, ದಿನಾಂಕ 30-4-1985ರ ಅನುಸಾರವಾಗಿ ಸಿ ಮತ್ತು ಡಿ ವರ್ಗದ ಹಾಗೂ ಇತರ ಲಭ್ಯವಿರುವ ಭೂಮಿಯನ್ನು ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ನೀಡಿದೆ.

ಆ) ಒತ್ತುವರಿ ಮಾಡಿರುವುದಿಲ್ಲ

ಇ) ಎಂ.ಪಿ.ಎಂ. ನವರು ಬೆಳೆಸಿದ ನೆಡುತೋಪುಗಳು ಒತ್ತುವರಿ ಜಾಗದಲ್ಲಿ ಇಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಎಂ.ಪಿ.ಎಂ.ನವರು ಯಾವುದೇ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದಿಲ್ಲ ವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಶೋಲಾ ಕಾಡುಗಳನ್ನು ರಕ್ಷಿಸುವುದು

1993(2417) - ಶ್ರೀ ಸದಾನಂದಗೌಡ ಡಿ.ವಿ (ಪುತ್ತೂರು) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಪಶ್ಚಿಮ ಘಟ್ಟಗಳ ಪ್ರದೇಶದ ವ್ಯಾಪ್ತಿ ಎಷ್ಟು? ಇಲ್ಲಿರುವ ಶೋಲಾ ಕಾಡುಗಳ ವಿಸ್ತೀರ್ಣ ಎಷ್ಟು?